ಕರ್ನಾಟಕ ಸರ್ಕಾರ
ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟ-587103
ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ
ದೇವದಾಸಿ ಪುನರ್ವಸತಿ ಯೋಜನೆ
ಜಿಲ್ಲಾ ಆಡಳಿತ ಭವನ, ರೂಂ ನಂ-209, ನವನಗರ
ದೂರವಾಣಿ ಸಂಖ್ಯೆ: 08354-235708 ಇ-ಮೇಲ್: dd.wcd.bgk@gmail.com

ಸಂ:ಉನಿಬಾ/ಮಮಅಇ/ಮಅನಿ/ದೇಪುಯೋ/ಯೋಜನಾಧಿಕಾರಿ.ಹುದ್ದೆ/2025-26

ದಿನಾಂಕ: 02-6-2025

**-: ಪ್ರಕಟಣೆ :-**

ವಿಷಯ:- ದೇವದಾಸಿ ಪುನರ್ವಸತಿ ಯೋಜನೆಯಡಿ ಜಿಲ್ಲಾ ಯೋಜನಾಧಿಕಾರಿಗಳ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಹುದ್ದೆ ಭರ್ತಿ ಮಾಡಲು ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

ಉಲ್ಲೇಖ:-
1) ಪ್ರಧಾನ ಕಛೇರಿಯ ಪತ್ರ ಸಂ:KSWDC/SCH/DPRSJ/01/2024(115666) ಬೆಂಗಳೂರು ದಿನಾಂಕ: 18-03-2025
2) ಮಾನ್ಯ ಜಿಲ್ಲಾಧಿಕಾರಿಗಳು ಬಾಗಲಕೋಟ ಹಾಗೂ ಅಧ್ಯಕ್ಷರು ಜಿಲ್ಲಾ ಸಮಿತಿ ಇವರ ಅನುಮೋದನೆ ದಿನಾಂಕ:23-5-2025 ರ ಪ್ರಕಾರ

* * * * *

**ಬಾಗಲಕೋಟ:-**ಜಿಲ್ಲೆಯ ದೇವದಾಸಿ ಪುನರ್ವಸತಿ ಯೋಜನೆಯಡಿ ಉಲ್ಲೇಖ ರನ್ವಯ ಪ್ರಧಾನ ಕಛೇರಿಯ ಮಾರ್ಗಸೂಚಿಯಂತೆ ನೇರ ಗುತ್ತಿಗೆ ಆಧಾರದ ಮೇಲೆ ಜಿಲ್ಲಾ ಯೋಜನಾಧಿಕಾರಿಗಳ ಹುದ್ದೆಯ ಭರ್ತಿಗಾಗಿ ಈ ಕೆಳಗಿನ ವಿವರದಂತೆ ಸಿಬ್ಬಂದಿಯನ್ನು ಭರ್ತಿ ಮಾಡಲು ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯ ನಮೂನೆಯನ್ನು bagalkot.nic.in ಯಲ್ಲಿ ಪಡೆಯುವದು.

**: ವಿವರ :**

| ಕ್ರ ಸಂ | ಜಿಲ್ಲೆಯ ಹೆಸರು | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ | ನಿಗದಿ ಪಡಿಸಲಾದ ವಿದ್ಯಾರ್ಹತೆ ಮತ್ತು ಅನುಭವ |
|---|---|---|---|---|
| 1 | ಬಾಗಲಕೋಟ | ಜಿಲ್ಲಾ ಯೋಜನಾಧಿಕಾರಿಗಳು | 01 ಹುದ್ದೆ | ನಿವೃತ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/MSW/ MA in SOCIOLAGY/ MA-MSC in PSYCHOLOGY ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ನಿವೃತ್ತ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು 65 ವರ್ಷ ವಯಸ್ಸಿನೊಳಗೆ ಇರುವವರಿಗೆ ಆದ್ಯತೆ ನೀಡಲಾಗುವದು. |

ಸ್ವ-ವಿವರಗಳೊಂದಿಗೆ ವಿದ್ಯಾರ್ಹತೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಹಾಗೂ ಇತ್ತೀಚಿನ ಭಾವಚಿತ್ರವನ್ನು ಅರ್ಜಿ ಜೊತೆಗೆ ಲಗತ್ತಿಸಿ **ದಿನಾಂಕ:03-06-2025 ರಿಂದ ದಿನಾಂಕ : 20-06-2025 ರಂದು ಕಚೇರಿಯ ಅವಧಿಯೊಳಗೆ ರೊಳಗಾಗಿ** ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಾಗಲಕೋಟ ಕೊಠಡಿ ಸಂಖ್ಯೆ:224, 208, 2ನೇ ಮಹಡಿ ಜಿಲ್ಲಾ ಆಡಳಿತ ಭವನ, ನವನಗರ ಬಾಗಲಕೋಟ ಜಿಲ್ಲೆ ಇಲ್ಲಿಗೆ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿದೆ.

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬಾಗಲಕೋಟ.

## -: ನೇಮಕಾತಿ ಷರತ್ತುಗಳು :-

1. ಉಲ್ಲೇಖ-1ರ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು ಇವರ ಪತ್ರದನ್ವಯ ದೇವದಾಸಿ ಪುನರ್ವಸತಿ ಯೋಜನೆಯಡಿಯಲ್ಲಿ ಯೋಜನಾಧಿಕಾರಿಗಳಾಗಿ ಕಾರ್ಯನಿರ್ವಹಿಸಲು ಸಿಬ್ಬಂದಿ ಸೇವೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆರವರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

2. ಸದರಿ ನೇಮಕಾತಿಯನ್ನು ಗೌರವಧನದ ಮೇಲೆ ತಾತ್ಕಾಲಿಕವಾಗಿ 11 ತಿಂಗಳ ಅವಧಿಗೆ ಮಾಡಿಕೊಳ್ಳಲಾಗುತ್ತಿದ್ದು, ಅಭ್ಯರ್ಥಿಗಳ ಕಾರ್ಯಕ್ಷಮತೆಯನ್ನು ಪರಿಗಣಿಸಿ ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆರವರ ಅಧ್ಯಕ್ಷತೆಯಲ್ಲಿನ ದೇವದಾಸಿ ಪುನರ್ವಸತಿ ಯೋಜನೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯಲ್ಲಿ ಸೇವೆ ಮುಂದುವರಿಕೆಗಾಗಿ ಒಪ್ಪಿಗೆ ಪಡೆದುಕೊಂಡು ಸೇವೆಯನ್ನು ಮುಂದುವರಿಸಲು ಕ್ರಮ ವಹಿಸಲಾಗುವುದು.

3. ಸದರಿ ನೇಮಕಾತಿಯು ಗೌರವಧನದ ಆಧಾರದ ಮೇಲೆ ತಾತ್ಕಾಲಿಕವಾಗಿದ್ದು ಆಯ್ಕೆಯಾದ ಅಭ್ಯರ್ಥಿಗಳು ಸೇವೆ ಖಾಯಂ ಮಾಡುವ ಸಂಬಂಧ ಹಕ್ಕೊತ್ತಾಯ ಮಾಡುವಂತಿಲ್ಲ.

4. ಆಯ್ಕೆಯಾದ ಸಿಬ್ಬಂದಿಯವರಿಗೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಗೌರವಧನವನ್ನು ನಿಗಮದ ಮಾರ್ಗ ಸೂಚಿಗಳನ್ವಯ ಪಾವತಿಸಲಾಗುವುದು.

5. ಅರ್ಜಿ ನಮೂನೆ ಮತ್ತು ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಠಡಿ ಸಂಖ್ಯೆ-209, 224 ಜಿಲ್ಲಾ ಆಡಳಿತ ಭವನ, ನವನಗರ ಬಾಗಲಕೋಟೆ-587103 ರವರ ಕಾರ್ಯಾಲಯದಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

6. ಅಭ್ಯರ್ಥಿಗಳ ಆಯ್ಕೆಯಲ್ಲಿ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ.

7. ಅರ್ಜಿಯ ನಮೂನೆಯನ್ನು bagalkot.nic.in ಯಲ್ಲಿ ಪಡೆಯುವದು.

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬಾಗಲಕೋಟ.

ಪ್ರತಿಯನ್ನು:
1) ಮಾನ್ಯ ಜಿಲ್ಲಾಧಿಕಾರಿಗಳು .ಬಾಗಲಕೋಟ ರವರಿಗೆ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.
2) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.ಜಿಲ್ಲಾ ಪಂಚಾಯತ .ಬಾಗಲಕೋಟ ರವರಿಗೆ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.
3) ಮಾನ್ಯ ವ್ಯವಸ್ಥಾಪಕ ನಿರ್ದೇಶಕರು.ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು ರವರಿಗೆ ಮಾಹಿತಿಗಾ ಗೌರವ ಪೂರ್ವಕವಾಗಿ ಸಲ್ಲಿಸಲಾಗಿದೆ.
4) ಕಚೇರಿ ಪ್ರತಿ